ಕವಿಚಕ್ರವರ್ತಿ

ಪೊನ್ನಮಹಾಕವಿ ಪ್ರಣೀತ

ಜಿನಾಕ್ಷರಮಾಲೆ

ಸಂಪಾದಕರು :

ಶ್ರೀ ಎಸ್. ಬೊಮ್ಮರಸ ಪಂಡಿತರು

ಮೈಸೂರು

ಪ್ರಕಾಶಕರು :

ರತ್ನತ್ರಯ ಪ್ರಕಾಶನ

ಕುವೆಂಪುನಗರ, ಮೈಸೂರು 23.

ರತ್ನತ್ರಯ ಪ್ರಕಾಶನ

713, ಇ ಮತ್ತು ಎಫ್ ಬ್ಲಾಕ್, ಚಿತ್ರಭಾನು ರಸ್ತೆ,
ಕುವೆಂಪುನಗರ, ಮೈಸೂರು-570 023.

✆ : 0821-541022

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಪುಸ್ತಕದ ಹೆಸರು	ಬೆಲೆ ರೂ.
ದೇವ-ಗುರು ಶಾಸ್ತ್ರ ಪೂಜೆ	 5
ಶ್ರೀ ಜಿನ ಭಜನೆಗಳು	 5
ತತ್ವಾರ್ಥಸೂತ್ರ ಮತ್ತು ಭಕ್ತಾಮರ ಸ್ತೋತ್ರ	 5
ಬ್ರಹ್ಮದೇವರ ಸಹಸ್ರನಾಮ	 5
ಪುಣ್ಯಬಂಧ	 500
ರತ್ನಾಕರ ವೈಭವ	 400
ಚಾಮುಂಡರಾಯ ಪುರಾಣ	 180
ರತ್ನಾಕರ	 60
ಗಂಧದವನೊಡನೆ ಗುದ್ದಾಟ	 12
ಸಾಮ್ರಾಟ್ ಖಾರವೇಲ	 15
ಕೊಪ್ಪಳ ಶಾಸನಗಳು	 100
ಶಾಸನಗಳಲ್ಲಿ ಬಸದಿಗಳು	 30

ಕವಿಚಕ್ರವರ್ತಿ

ಪೊನ್ನಮಹಾಕವಿ ಪ್ರಣೀತ

ಜಿನಾಕ್ಷರಮಾಲೆ

ಸಂಪಾದಕರು :

ಶ್ರೀ ಎಸ್. ಬೊಮ್ಮರಸ ಪಂಡಿತರು

ಮೈಸೂರು

ಪ್ರಕಾಶಕರು :

"ರತ್ನತ್ರಯ ಪ್ರಕಾಶನ"

ಕುವೆಂಪುನಗರ, ಮೈಸೂರು-23.

" ಜಿನಾಕ್ಷರಮಾಲೆ "

ಸಂಪಾದಕರು : ಶ್ರೀ ಬೊಮ್ಮರಸ ಪಂಡಿತರು
ಮೈಸೂರು

ಪ್ರಕಾಶಕರು : ರತ್ನತ್ರಯ ಪ್ರಕಾಶನ
ಇ ಮತ್ತು ಎಫ್ ಬ್ಲಾಕ್, ಚಿತ್ರಬಾನು ರಸ್ತೆ,
ಕುವೆಂಪುನಗರ, ಮೈಸೂರು-23

ಬೆಲೆ : ಹತ್ತು ರೂಪಾಯಿಗಳು

ಪ್ರತಿ ದೊರೆಯುವ ಸ್ಥಳ :
713, ಇ ಮತ್ತು ಎಫ್ ಬ್ಲಾಕ್, ಚಿತ್ರಬಾನು ರಸ್ತೆ,
ಕುವೆಂಪುನಗರ, ಮೈಸೂರು-23

ಮುದ್ರಕರು :
ರತ್ನತ್ರಯ ಪ್ರಿಂಟರ್ಸ್,
ಕುವೆಂಪುನಗರ, ಮೈಸೂರು-23

ಮುನ್ನುಡಿ

ಈ ಜಿನಾಕ್ಷರಮಾಲೆಯೆಂಬ ಜಿನಸ್ತೋತ್ರವು ಉಭಯ ಕವಿಚಕ್ರವರ್ತಿ ಪೊನ್ನಮಹಾಕವಿಯಿಂದ ರಚಿತವಾದುದು. ಇದನ್ನು ಮದರಾಸು ಯೂನಿವರ್ಸಿಟಿ ಕನ್ನಡ ಟ್ರಾನ್ಸಲೇಟ ರಾಗಿದ್ದ ಶ್ರೀಮಾನ್ ಹೆಚ್- ಶೇಷಯ್ಯಂಗಾರರು ಪುಸ್ತಕ ರೂಪದಲ್ಲಿ ಪ್ರಕಟಿಸಿರುವರು. ಅವರ ಅನುಮತಿಯೊಡನೆ ಅದನ್ನೇ ಕನ್ನಡ ತಾತ್ಪರ್ಯದೊಡನೆ ಸಂಘದ ೯ ನೇ ಪುಷ್ಪವಾಗಿ ಮುದ್ರಿಸಿದೆ. ಈ ಗ್ರಂಥದ ವಿಷಯವಾಗಿ ಮ।। ರಾ।। ಶೇಷಯ್ಯಂಗಾರರು ತಮ್ಮ ಮುನ್ನುಡಿಯಲ್ಲಿ :

"ಜಿನಾಕ್ಷರಮಾಲೆ"ಯೆಂಬ ಈ ಗ್ರಂಥವು ಜಿನಸ್ತೋತ್ರ ರೂಪವಾಗಿದ್ದರೂ ಖಂಡಕಾವ್ಯವೆಂದು ಹೇಳಿಸಿಕೊಳ್ಳುವಷ್ಟು ಮಹತ್ವವುಳ್ಳುದಾಗಿದೆ. ಸಾಸಿವೆಯ ಕಾಳೊಂದನ್ನು ರಂಧ್ರ ಮಾಡಿ ಏಳು ಸಮುದ್ರವನ್ನೂ ಅದರೊಳಗೆ ತುಂಬಿದಂತೆ ಕವಿಯು ಜಿನಮತದ ಪ್ರಕ್ರಿಯೆಯೆಲ್ಲವನ್ನೂ ಈ ಚಿಕ್ಕ ಸ್ತೋತ್ರ ಗ್ರಂಥದಲ್ಲಿ ಅಡಕಮಾಡಿ ಹೇಳಿರುವನು. ಇದು ಕೇವಲ ಕಂದ ಜಾತಿಯಲ್ಲಿ ಬರೆಯಲ್ಪಟ್ಟಿದೆ; ೩೯ ಕಂದಗಳಿರುವುವು. ಕವಿಯು ವರ್ಣಮಾಲೆಯ ಕ್ರಮವನ್ನನುಸರಿಸಿ ಸ್ವರಾಕ್ಷರ ಗಳನ್ನು ಬಿಟ್ಟು ವ್ಯಂಜನಾಕ್ಷರಗಳನ್ನು ಮಾತ್ರವೇ ಆರಂಭ ಮಾಡಿಕೊಂಡು ಒಂದೊಂದು ಅಕ್ಷರವು ಒಂದೊಂದು ಕಂದದ ಆದಿಯಲ್ಲಿ ಬರುವಂತೆಯೂ ಪ್ರತಿಯೊಂದು ಕಂದದ ಕೊನೆಯ

ಅಕ್ಷರವು ಮುಂದಣ ಕಂದದ ಆಧ್ಯಕ್ಷರವಾಗುವಂತೆಯೂ ತಂದು ಜೋಡಿಸಿರುವನು. ಇದಕ್ಕೆ ಅಂತಾದಿ ಕ್ರಮವೆಂದು ಹೆಸರು ಈ ಬಗೆಯ ಗ್ರಂಥಗಳು ದ್ರಾವಿಡ ಭಾಷೆಯಲ್ಲಿ ಹೇರಳವಾಗಿವೆ. "ಆಳ್ವಾರು"ಗಳೆಂಬ ಭಕ್ತರ ಸ್ತೋತ್ರಗಳೆಲ್ಲವೂ ಈ ಬಗೆಯ ಅಂತಾದಿ ಕ್ರಮದಲ್ಲಿಯೇ ರಚಿತವಾಗಿರುವುವು ಈ ಪದ್ಧತಿಯು ಸ್ತೋತ್ರ ಗ್ರಂಥಗಳಲ್ಲೇ ವಿಶೇಷವಾಗಿ ಆಚರಣೆಗೆ ಬಂದಿರುವುದು. ಇದರಲ್ಲಿ ಆದಿಯ ಮಂಗಳಪದ್ಯ, ಅಂತ್ಯದ ಫಲಶ್ರುತಿಯ ಪದ್ಯ ಇವೆರಡನ್ನು ಬಿಟ್ಟರೆ ೩೭ ಪದ್ಯಗಳು ಉಳಿದಿರುವುವು. ವರ್ಣ ಮಾಲೆಯಲ್ಲಿ ಇವುಗಳ ವಿನಿಯೋಗವು ಹೇಗೆಂದರೆ : ವರ್ಗೀಯ ವ್ಯಂಜನಗಳು ೨೫ ; ಅವರ್ಗೀಯುಗಳು ೮ ; ರಱ-ಳ಴-ಱ- (ದೇಶೀಯಾಕ್ಷರಗಳು) ಕ್ಷ-ಎಂಬೀ ನಾಲ್ಕಕ್ಷರಗಳು ಒಟ್ಟು ೩೭ ವ್ಯಂಜನಗಳನ್ನು ವರ್ಣಮಾಲೆಯಲ್ಲಿ ಈತನು ಅಂಗೀಕರಿ ಸಿರುವನು. ಇವುಗಳಲ್ಲಿ "ಕ್ಷ" ಎಂಬುದು ಸಹಜವರ್ಣವಲ್ಲದೆ ಕ ಕಾರ ಷ ಕಾರಗಳ ಸಂಯೋಗದಿಂದ ಹುಟ್ಟಿದ ಸಂಯುಕ್ತ ವರ್ಣವಾಗಿದ್ದರೂ, "ಳ, ಕ್ಷ, ರ, ಇತಿ" ಎಂಬ ವರ್ಣಮಾಲಾ ವ್ಯವಹಾರದ ಶಿಷ್ಟಾಚಾರವನ್ನನುಸರಿಸಿ ಇದು ವರ್ಣಮಾಲೆ ಯಲ್ಲಿ ಸೇರಿಕೊಂಡು ಬಂದಿರುವುದು ; ಅಲ್ಲದೆ ಮಂತ್ರಶಾಸ್ತ್ರ ದಲ್ಲಿ ಇದನ್ನು ಬೇರೊಂದು ವರ್ಣವಾಗಿಯೇ ಗ್ರಹಿಸಿಯೂ ಇರುವರು.

ಇದನ್ನು ಬರೆದವನು "ಪೊನ್ನಕವಿ" (ಕುರುಳ್ಗಳಸವಣಂ). ಈತನು ರಾಷ್ಟ್ರಕೂಟ ಸಾಮ್ರಾಜ್ಯನಾದ ಕನ್ನರ (II ಕೃಷ್ಣ ರಾಜ)ನಿಂದ "ಉಭಯಕವಿ ಚಕ್ರವರ್ತಿ" ಎಂಬ ಬಿರುದನ್ನು

ಪಡೆದವನು. ಇವನು ಜೈನಕವಿ ಸಮುದಾಯದ ರತ್ನತ್ರಯದಲ್ಲಿ ಒಬ್ಬನೆಂದೂಪರಿಗಣಿತನಾಗಿರುವನು. ಇವನ ಕಾಲವು ಸುಮಾರು ಕ್ರಿ. ಶ. ೯೫೦. ಇವನಿಂದ ರಚಿತವಾದ ಗ್ರಂಥಗಳಲ್ಲಿ ಶಾಂತಿ ಪುರಾಣವು ಉಪಲಬ್ಧವಾಗಿ ಮುದ್ರಿತವಾಗಿದೆ. ಮತ್ತೊಂದಾದ "ಭುವನೈಕರಾಮಾಭ್ಯುದಯ" ವೆಂಬುದು ಇದುವರೆಗೂ ದೊರೆತಿಲ್ಲ. ಆದರೆ ಅದರ ಒದೆಂರಡು ಪದ್ಯಗಳು ಮಾತ್ರ ಶಬ್ದಮಣಿ ದರ್ಪಣವೆಂಬ ಕರ್ನಾಟಕ ವ್ಯಾಕರಣದ ಉದಾಹರಣೆಗಳಲ್ಲಿ ದೊರಕುವುವು".

ಹೀಗೆಂದು ಹೇಳಿರುವರು. ಕವಿಚರಿತ್ರೆ ಮತ್ತು ಗ್ರಂಥದ ವಿಷಯವಾಗಿ ಇನ್ನೇನನ್ನೂ ಹೆಚ್ಚಾಗಿ ಹೇಳಬೇಕಾದುದಿಲ್ಲ. ಸಾಹಿತ್ಯ ಪ್ರಚಾರ ಸಂಘದವರಿಗಾಗಿ ನಾನು ಈ ಗ್ರಂಥಕೆ ತಾತ್ಪರ್ಯವನ್ನು ಬರೆದು ಕೊಟ್ಟಿರುತ್ತೇನೆ.

31-5-1951
ಮೈಸೂರು

ಇತಿ
ಸಜ್ಜನ ವಿಧೇಯ
ಎಸ್. ಬೊಮ್ಮರಸಪಂಡಿತ

ದ್ವಿತೀಯ ಕುಮಾರ ದಿವಂಗತ ಶ್ರೀನಿವಾಸಯ್ಯನವರ ಸ್ಮಾರ
ಗ್ರಂಥವಾಗಿ ಪ್ರಕಟಿಸಲ್ಪಟ್ಟಿದೆ. ಶ್ರೀಯುತರು ಲಗ್ನವಾ
ಕೆಲವೇ ವರ್ಷಗಳಲ್ಲಿ ಅಪಮೃತ್ಯುವಿಗೆ ಒಳಗಾದರು. ದಿವಂಗತ
ಆತ್ಮನಿಗೂ ಅವರ ಕುಟುಂಬದವರಿಗೂ ಚಿರಶಾಂತಿಯನ್ನೀಯ
ಲೆಂದು ದಯಾಮಯನಾದ ಭಗವಂತನನ್ನು ಪ್ರಾರ್ಥಿಸುತ್ತೇವೆ

ಸಕಾಲದಲ್ಲಿ ಅಂದವಾಗಿ ಮುದ್ರಣ ಮಾಡಿಕೊಟ್ಟ
ಶ್ರೀಮಾನ್ ಅ. ನಾ. ಚಂದ್ರಕೀರ್ತಿಯವರಿಗೂ ನಮ
ಅಭಿನಂದನೆಗಳು.

ಯಂ. ಸಿ. ಪದ್ಮನಾಭ ಶರ್ಮ
ಕಾರ್ಯದರ್ಶಿ

ಅಭಿನಂದನೆ

ಧರ್ಮ ಬಾಂಧವರೆ !

ಸಂಘದ ಆಶ್ರಯದಲ್ಲಿ ಯಶೋಧರಚರಿತ್ರೆ, ಪಂಚ ಸ್ತೋತ್ರ, ಯೋಗಾಮೃತಶತಕ, ಯೋಗಸಾರ, ಶಾಂತಶೃಂಗಾರ ವಿಲಾಸ, ತತ್ತ್ವಾರ್ಥಸೂತ್ರ, ಸಾಮಾಯಿಕಪಾಠ, ಈ ಗ್ರಂಥಗಳು ಪ್ರಕಟವಾಗಿ ಒಂಭತ್ತನೆಯದಾಗಿ ಜಿನಾಕ್ಷರ ಮಾಲೆಯು ಪ್ರಕಟಿಸಲ್ಪಟ್ಟಿದೆ. ಈ ಗ್ರಂಥವು ಕವಿಚಕ್ರವರ್ತಿ ಪೊನ್ನಮಹಾಕವಿ ರಚಿಸಿದುದಾಗಿದೆ. ಈತನು ಶಾಂತಿಪುರಾಣ ವೆಂಬ ಉತ್ತಮ ಗ್ರಂಥವನ್ನು ರಚಿಸಿರುತ್ತಾನೆ. ಜಿನಾಕ್ಷರ ಮಾಲೆಯು ಚಿಕ್ಕದಾದರೂ ಉನ್ನತಪಾಂಡಿತ್ಯದಿಂದ ರಚಿಸ ಲ್ಪಟ್ಟಿದೆ. ಈ ಗ್ರಂಥಕ್ಕೆ ಮೈಸೂರಿನ ಶ್ರೀ ಎಸ್. ಬೊಮ್ಮರಸ ಪಂಡಿತರು ತಿಳಿಗನ್ನಡದ ಅನುವಾದವನ್ನು ಮಾಡಿರುತ್ತಾರೆ. ಈ ಗ್ರಂಥವನ್ನು ಪ್ರಕಟಿಸಲು ಮುಂದೆ ಬಂದಿರುವ ಶ್ರೀಮಾನ್ ಸರಗೂರು ಚಲುವಯ್ಯನವರ ಮತ್ತು ಅವರ ಮಗಳು ಶ್ರೀಮತಿ ಕಮಲಮ್ಮನವರ ಉದಾಗ ದಾನವು ಅತ್ಯಂತ ಸ್ತುತ್ಯ ವಾದುದು. ನಾವು ಕಾರ್ಯ ನಿಮಿತ್ತವಾಗಿ ಮಳಲಿ ಎಂಬ ಗ್ರಾಮಕ್ಕೆ ಹೋಗಿದ್ದಾಗ ತಾವೇ ಬರಮಾಡಿಕೊಂಡು ಗ್ರಂಥ ವೊಂದನ್ನು ಪ್ರಕಟಿಸುವ ತಮ್ಮ ಧಾರ್ಮಿಕೇಚ್ಛೆಯನ್ನು ವ್ಯಕ್ತ ಪಡಿಸಿದರು. ಇದಕ್ಕಾಗಿ ಉಭಯಮಹನೀಯರಿಗೂ ಸಂಘವು ತನ್ನ ಕೃತಜ್ಞತೆಯನ್ನು ಅರ್ಪಿಸುವುದರ ಮೂಲಕ ಅಭಿನಂದನೆ ಯನ್ನು ಸಲ್ಲಿಸುತ್ತದೆ. ಇದು ಶ್ರೀಮತಿ ಕಮಲಮ್ಮನವರ

ಮರುಮುದ್ರಣಕ್ಕೆ ಮುನ್ನುಡಿ

ಜಿನಾಕ್ಷರಮಾಲೆ ಎಂಬ ಈ ಕಿರು ಪುಸ್ತಕವನ್ನು ಜೈ
ಧರ್ಮಭೂಷಣ ಸಾಹಿತ್ಯರತ್ನ ಶ್ರೀ ಜಿ. ಬ್ರಹ್ಮಪ್ಪನವರ
ಒದಗಿಸಿ ಇದನ್ನು ಮುದ್ರಿಸಲು ಉದ್ಯುಕ್ತರಾಗುವಂತೆ ತಿಳಿಸಿದರ

ಈ ಪುಸ್ತಕವನ್ನು ಮುದ್ರಿಸಲು ಅನುಮತಿ ನೀಡಿದ ಜೈ
ಸಾಹಿತ್ಯ ಪ್ರಚಾರ ಸಂಘ ಕಾರ್ಯದರ್ಶಿ ಶ್ರೀ ಎಂ. ಸಿ. ಪದ
ನಾಭಶರ್ಮರವರಿಗೂ, ಸಂಪಾದಕರಾದ ಶ್ರೀ ಎಸ್
ಬೊಮ್ಮರಸಯ್ಯನವರ ಸುಪುತ್ರರಾದ ಶ್ರೀ ಅನಂ
ಕುಮಾರ್‌ರವರಿಗೂ ಮತ್ತು ಅವರ ಕುಟುಂಬದ ಎಲ
ಸದಸ್ಯರಿಗೂ ಧನ್ಯವಾದಗಳು. ಇದರ ನಿತ್ಯಪಠನ ಸವ
ಶ್ರೇಯೋಭಿವೃದ್ಧಿಗೆ ಕಾರಣ.

ಪ್ರಕಾಶಕರು
ರತ್ನತ್ರಯ ಪ್ರಕಾಶ

॥ ಶ್ರೀ ॥

ಉಭಯಕವಿಚಕ್ರವರ್ತಿ

ಪೊನ್ನಮಹಾಕವಿ ವಿರಚಿತ

ಜಿನಾಕ್ಷರಮಾಲೆ

॥ ಕಂದ ॥

ಶ್ರೀಮತ್ಸಮಸ್ತಲೋಕಶಿ ।
ಖಾಮಣಿ ನಿಷ್ಕಪಟವಿನಯವಿನಮಿತಜನಚಿಂ ॥
ತಾಮಣಿ ಜಿನನಿನಗೆಜಗೆ ಮ ।
ಹಾಮಹಿಮಪ್ರಾಪ್ತರಪ್ಪರೆಂಬುದು ಲೋಕಂ ॥

॥ ತಾತ್ಪರ್ಯ ॥

ಶ್ರೀಮಂತನೂ ಅಂದರೆ ಅಂತರಂಗ ಬಹಿರಂಗ ಲಕ್ಷ್ಮಿ ಯೊಡನೆ ಕೂಡಿದವನೂ, ಸಮಸ್ತಲೋಕಗಳಿಗೂ ಶಿರೋಭೂಷಣಪ್ರಾಯನಾದವನೂ, ನಿಷ್ಕಪಟವಾದ ಭಕ್ತಿಯಿಂದ ಕೂಡಿ ನಮಸ್ಕರಿಸುವ ಜನರಿಗೆ ಸಕಲಾಭೀಷ್ಟಗಳನ್ನೂ ಕೊಡುವ ಚಿಂತಾಮಣಿರತ್ನದಂತಿರುವವನೂ ಆದ ಎಲೈ ಜಿನೇಶ್ವರನೆ ! ನಿನಗೆ ನಮಸ್ಕಾರ ಮಾಡುವ ಜನರು ಮಹಾಮಹಿಮೆಯನ್ನು ಅಸದೃಶವಾದ ಶಕ್ತಿಯನ್ನು) ಹೊಂದುವರೆಂಬುದು ಲೋಕ ಪ್ರಸಿದ್ಧವಾಗಿದೆ.

ಕೆಂತುಮದಹರಣ ದುರಿತಬ ।
ಳಾಂತಕ ದಿವಿಜೇಂದ್ರವಂದ್ಯ ನಿರ್ವೃತಿಲಕ್ಷ್ಮೀ
ಕಾಂತ ಭವತ್ಪದಯುಗಮಂ ।
ಚಿಂತಿಸುವಂಗಾವುದರಿದು ತುಹಿನಕರನಖಾ

ಮನ್ಮಥನ ಶಕ್ತಿಯನ್ನು ನಾಶಮಾಡಿದವನೂ (ಇಂದ್ರಿಯ ಸುಖವಿಮುಖನಾದ), ಪಾಪ ಸಮೂಹವನ್ನು ನಾಶಮಾಡಿರುವವನೂ, ಇಂದ್ರಾದಿಗಳಿಂದ ನಮಸ್ಕರಿಸಲ್ಪಡ ತಕ್ಕವನೂ, ಮೋಕ್ಷಲಕ್ಷ್ಮಿಗೊಡೆಯನೂ, ಚಂದ್ರಕಿರಣದಂತೆ ಹೊಳೆಯುತ್ತಿರುವ ಉಗುರುಗಳಿಂದ ಕೂಡಿದ ಚರಣ ಗಳುಳ್ಳವನೂ ಆದ ಸ್ವಾಮಿಯೆ! ನಿನ್ನ ಪಾದಗಳೆರಡನ್ನೂ ಚಿಂತಿಸು (ಧ್ಯಾನಮಾಡು) ವವನಿಗೆ ಯಾವುದು ತಾನೆ ಅಸಾಧ್ಯವಾದುದಾಗುತ್ತದೆ. 'ಜಿನಭಕ್ತನಿಗೆ ಎಲ್ಲವೂ ಸಾಧ್ಯ ವಾಗುದೆಂದು ಭಾವವು)-

ಖಚರಸುರೋರಗನರರಾ।
ತ್ರಿಚರಚಮೂವಂದ್ಯ ನೆರೆಯೆ ಧಾವಿಸುವಾಗಳ್ ॥
ಸಚರಾಚರೋರ್ವಿಯೊಳೆ ನಿ।
ನ್ನ ಚರಿತ್ರಂ ಚಿತ್ರಮೆಂದು ಪೊಗಟ್ದುವುದು ಜಗಂ ॥

ಖೇಚರರೇನು, ದೇವತೆಗಳೇನು, ನಾಗದೇವತೆಗಳೇನು ಮನುಷ್ಯರೇನು, ರಾಕ್ಷಸರೇನು (ಪಿಶಾಚರು) ಇವರೆಲ್ಲರಿಂದಲೂ ನಮಸ್ಕರಿಸಿಕೊಳ್ಳುವ (ಲೋಕದವರೆಲ್ಲರಿಂದಲೂ ಎರಗಿಸಿ ಕೊಳ್ಳುವ) ಜಿನೇಶ್ವರನೆ! ಅನಂತದರ್ಶನ, ಅನಂತಜ್ಞಾನ ಅನಂತಸುಖ, ಅನಂತವೀರ್ಯಶಕ್ತಿಗಳನ್ನುಳ್ಳ ನಿನ್ನ ಮೋಕ್ಷ ಸಾಧನೋಪಾಯದ ಉಪದೇಶಗಳನ್ನು ಚನ್ನಾಗಿ ಕೇಳಿ ತಿಳಿದು ಮನನಮಾಡಿಕೊಂಡು ನಿನ್ನನ್ನು ಧ್ಯಾನಿಸುವ ಜನರು ನಿನ್ನ

ತರಿತ್ರೆ (ಪರಿಶುದ್ಧವಾದ ನಡತೆ) ಯು ಸಚರಾಚರವಸ್ತುಗಳಿಂದ
ತುಂಬಿದ ಈ ಲೋಕದಲ್ಲಿ ಅತ್ಯಂತ ಆಶ್ಚರ್ಯಕರವೆಂದು ಹೊಗಳು
ವರು (ಎಂದರೆ ಲೋಕದಲ್ಲಿರುವ ನಶ್ವರವಾದ ಎಲ್ಲಾ ವಿಷಯ
ಗಳನ್ನೂ ತೊರೆದು–ಅಲೋಕ [ಸಿದ್ಧಕ್ಷೇತ್ರ]ಕ್ಕೆ ಹೋಗಿ
ಶಾಶ್ವತವಾದ ಸುಖವನ್ನು ಹೊಂದಿರುವ ಸಾಮರ್ಥ್ಯವು
ವಿಚಿತ್ರತರ–ಎಲ್ಲೂ ಕಾಣಲಾಗದಂತಹ ವಿಲಕ್ಷಣವಾದುದು)

ಗಜವೈರಿಪೀಠ ಜಿನನಾ ।
ಥ ಜಗನ್ನುತ ಬಂದು ಭಕ್ತಿಯಿಂ ನಿನ್ನ ಪದಾಂ ॥
ಬುಜಮಂ ಕಂಡೊಡೆ ದುರಿತ
ವ್ರಜಮೊರ್ಮೆಯೆ ಬೆದರಿ ಕೆದರಿ ಕಿಡುಗುಮಮೋಘಂ

ಸಿಂಹಪೀಠಮಂಡಿತನೂ, ಮೂರು ಲೋಕಗಳಿಂದ
ಸ್ತೋತ್ರಮಾಡಲ್ಪಡುವವನೂ ಆದ ಜಿನನಾಥನೆ! ನಿನ್ನ
ಸಮೀಪಕ್ಕೆ ಬಂದು ಭಕ್ತಿಪೂರ್ವಕವಾಗಿ ನಿನ್ನ ಚರಣಕಮಲ
ಗಳನ್ನು ನೋಡಿದರೇ ಪಾಪಸಮೂಹಗಳೆಲ್ಲವೂ ಬೆಚ್ಚಿ, ಓಡಿ
ನಾಶವಾಗುವುವೆಂಬುದು ಅತ್ಯಂತ ಆಶ್ಚರ್ಯವಾದುದಾಗಿದೆ.

ಘನದುಷ್ಕೃತಬಳನಿರ್ವೇ ।
ದನಕರಚಾರಿತ್ರ ಚಿತ್ರಮಾಗಿರೆ ಪೊಗಟ್ಟಿಂ ॥
ಜಿನನಾಥ ಭವದ್ಗುಣಮಂ ।
ವಿನತೋರ್ವೀಜನಮನಂತು ಮತ್ಪ್ರತಿ ಸಂಜ್ಞಾ ॥

ಜಿನನಾಥನೆ ! ಘೋರವಾದ ಪಾಪಸಮೂಹಗಳ ಶಕ್ತಿ
ಯನ್ನು ಕುಂದಿಸಿ ನಾಶಮಾಡಿದ ನಿನ್ನ ವಿಶುದ್ಧ ಚಾರಿತ್ರವು
ಅತ್ಯಂತ ವಿಚಿತ್ರತರವಾದುದಾಗಿರುವುದರಿಂದ ನಿನ್ನ ಭಕ್ತರಾದ
ಭವ್ಯಲೋಕವೇ ನಿನ್ನ ಶ್ರೇಷ್ಠವಾದ ಗುಣಗಳನ್ನು ಕೊಂಡಾಡು
ತ್ತಿರುವುದು. ಅನಂತ ಸಂಖ್ಯಾತವಾದ ನನ್ನ ಆತ್ಮನಂತೆಯೇ
ಈ ಸಂಸಾರ ಸಮುದ್ರದಲ್ಲಿ ತೊಳಲುತ್ತಿದ್ದ ನೀನು ನಿನ್ನ
ವಿಶುದ್ಧ ಪರಿಣಾಮದ ಬಲದಿಂದ ಲೋಕದಲ್ಲೆಲ್ಲಾ ಶ್ರೇಷ್ಠತಮ
ವಾದ ಶಾಶ್ವತವಾದ ಮುಕ್ತಿಸುಖವನ್ನು ಹೊಂದಿದೆಯಾಗಿ
ನಿನ್ನ ಸಮ್ಯಗ್ದರ್ಶನ ಜ್ಞಾನಚಾರಿತ್ರಯುಕ್ತವಾದ ಆಚರಣೆಯು
ಅತ್ಯಂತ ಆಶ್ಚರ್ಯಕರವಾದುದಾಗಿದೆ.

ಡಿವನಂ ಭಾವಳಯಂ ಪಿಂ ।
ಹವಿಷ್ಟರಂ ಚಮರಮಮರತೂರ್ಯಮಶೋಕಂ ॥
ಧವಳಚ್ಛತ್ರಂ ಸುರಪು ।
ಷ್ಪವೃಷ್ಟಿ ಜಿನನಾಥ ನಿನ್ನೊಳೆಸುವುದುನಿಚ್ಚಂ ॥

ದಿವ್ಯಧ್ವನಿಯೂ, ಭಾಮಂಡಲವೂ, ಸಿಂಹಪೀಠವೂ
ಚಾಮರಗಳೂ, ದೇವದುಂದುಭಿಯೂ, ಅಶೋಕ ವೃಕ್ಷವೂ
ಮುಕ್ಕೊಡೆಯೂ, ಪುಷ್ಪವೃಷ್ಟಿಯೂ ಈ ಎಂಟು ಪ್ರಾತಿ
ಹಾರ್ಯಗಳೂ ಯಾವಾಗಲೂ ನಿನ್ನಲ್ಲಿ ಪ್ರಕಾಶಮಾನವಾಗಿವೆ

ಚತುರಾಸ್ಯಂಗಂ ನೆಗಳ್ದಹಿ ।
ಪತಿಗಮಳುಂಬಾ ಭವದ್ಗುಣಂ ಚಿಂತಿಸಲುಂ ॥
ಸ್ತುತಿಯಿಸಲೆಂದೊಡೆ ವರಜಿನ ।
ಪತಿ ಪೆರತೇನೆಂದು ಪೊಗಳಲರಿಯಂ ಮ್ಲೇಚ್ಛಂ ॥

ಬ್ರಹ್ಮನಿಗೂ, ಆದಿಶೇಷನಿಗೂ ಸಹ ನಿಮ್ಮ ಗುಣಾವಳಿಯನ್ನು ತಿಳಿದು ಚಿಂತಿಸಿ ಸ್ತುತಿಸುವುದು ಅತ್ಯಂತ ಹೆಚ್ಚಿನದೆಂದ ಮೇಲೆ (ನಿಮ್ಮ ಗುಣಸಮೂಹವು ಬ್ರಹ್ಮ, ಆದಿಶೇಷರುಗಳ ತಿಳಿವಳಿಕೆಗೂ ಮೀರಿದುದು ಅಂದರೆ ಅವರಿಂದಲೂ ತಿಳಿಯಲು ಸಾಧ್ಯವಿಲ್ಲವೆಂದು ಭಾವವು) ಹೆ ಜಿನಪತಿಯೆ ! ನಿಮ್ಮ ಗುಣಗಳನ್ನು ಮ್ಲೇಚ್ಛನು ಅಂದರೆ ಮಿಥ್ಯಾದೃಷ್ಟಿಯು ಏನೆಂದು ತಾನೆ ಹೊಗಳಬಲ್ಲನು ? ಅವನಿಂದ ಸಾಧ್ಯವಿಲ್ಲ.

ಛತ್ರತ್ರಯಯುತ ವಿನಮಿತ ।
ಸುತ್ರಾಮಕಿರೀಟಮಣಿಗಣಾರ್ಚಿತಪದ ಜೀ ॥
ವತ್ರಾಣ ನೀನೆ ನೋಡೆ ಪವಿತ್ರನೆ ।
ನಿನಗದರಿನೊಳ್ಗುಣಂಗಳ್ ಸಹಜಂ ॥

ಎಲೆ ಸ್ವಾಮಿ, ನೀನೇ ಲೋಕತ್ರಯಾಧಿಪತಿಯೆಂದು ತೋರಿಸುವ ಚಿಹ್ನೆಯಾದ ಛತ್ರತ್ರಯದಿಂದ ಕೂಡಿದವನೂ, ನಮಸ್ಕರಿಸುವ ಇಂದ್ರಾದಿಗಳ ಕಿರೀಟಗಳಲ್ಲಿನ ರತ್ನಗಳ ಪ್ರಭೆಯಿಂದ ಪೂಜಿಸಲ್ಪಡುವವನೂ (ಇಂದ್ರಾದಿಗಳಿಂದ ನಮಸ್ಕೃತ

ನಾದವನೂ) ಸಮಸ್ತ ಜೀವರಾಶಿಗಳಿಗೆ ಆಧಾರಭೂತನೂ, ಅತ್ಯಂತ ಪವಿತ್ರನೂ ಆಗಿರುವುದರಿಂದ ಯೋಚನೆ ಮಾಡಿ ನೋಡಿದರೆ ಸಮಸ್ತ ಸದ್ಗುಣಗಳೂ ನಿನ್ನಲ್ಲಿರುವುದು ಸಹಜ

ಜಯಜಯ ಜಿನೇಂದ್ರ ಲೋಕ ।
ತ್ರಯವಂದ್ಯ ಸಮಸ್ತಮಾದ ರುಜೆ ವಿಷಮವಿಷ ॥
ತ್ರಯಮುರಿಗುಂ ನಿನ್ನ ಪದ ।
ದ್ವಯಮಂ ಚಿಂತಿಸುವೊಡೆನ್ನವೇವುವೊ ಮಜ್ಝಾ ? ॥

ಹೇ ಜಿನೇಂದ್ರನೇ ! ಜಯವಾಗಲಿ, ಜಯವಾಗಲಿ ! ಲೋಕತ್ರಯವಂದಿತನೆ ! ನಿನ್ನ ಚರಣದ್ವಂದ್ವವನ್ನು ಧ್ಯಾನಿಸುವುದರಿಂದಲೇ ಎಲ್ಲಾ ರೋಗಗಳೂ, ಸ್ಥಾವರ ಜಂಗಮ ಕೃತ್ರಿಮಗಳೆಂಬ ವಿಷತ್ರಯಗಳೂ ನಾಶವಾಗುವುದೆಂದ ಮೇಲೆ ಆ ನಿನ್ನ ಪದಕಮಲಗಳು ಏನನ್ನು ತಾನೆ ಮಾಡಲಾರವು ?

ಮಜ್ಝಾ ಎಂದಿರುವ ಇದು ಉವಜ್ಝಾ =ಉಪಾಧ್ಯಾಯ ಎಂದಿರಬಹುದೋ ?

ಝಷಕುಲಿಶಾಂಕಿತಪದಯುಗ ।
ವೃಷಭಧ್ವಜ ವೃಷಭನಾಥ ಸುಚರಿತ್ರ ಗಜ ॥
ದ್ವಿಷವಿಷ್ಟರ ಪೊಗಳಲ್ ವು ।
ದ್ವಿಷಯುಮೆ ನಿನ್ನ ಮಲಗುಣಗಣಂ ಸರ್ವಜ್ಞಾ ॥

ಮೀನು ಕೊಡಲಿ ಇವುಗಳ ಗುರುತುಗಳುಳ್ಳ ಪಾದಗಳಿಂದ ಶೋಭಿಸುವವನೂ, ವೃಷಭವೇ ಚಿಹ್ನೆಯಾಗುಳ್ಳವನೂ, (ಧರ್ಮವೇ ಅತ್ಯಂತ ದೊಡ್ಡದೆಂದು ತೋರಿಸುವವನೂ) ವೃಷಭನಾಥನೆಂಬ ಹೆಸರುಳ್ಳವನೂ, ಸಮೀಚೀನವಾದ ಚರಿತ್ರೆ (ನಡತೆ ಗುಣ) ಯುಳ್ಳವನೂ, ಸಿಂಹಪೀಠವಿರಾಜಿತನೂ ಆಗಿರುವ ಸರ್ವಜ್ಞನಾದ ಸ್ವಾಮಿಯೆ ! ನಿನ್ನ ಪವಿತ್ರವಾದ ಗುಣರಾಶಿಯನ್ನು ಹೊಗಳುವುದು ನನ್ನಂತಹ (ಅಲ್ಪಮತಿಗೆ) ವನಿಗೆ ಸಾಧ್ಯವೇ ? ಸಾಧ್ಯವಿಲ್ಲವೆಂದು ಭಾವವು.

ಜ್ಞಾನಮಯ ಸಿಂಹಪೀಠಾ
ಸೀನ ಜಗತ್ತ್ರಿತಯನಾಥ ನಿರ್ಮಲಶುಕ್ಲ ॥
ಧ್ಯಾನ ನಿವಗಲ್ಲದೇಕ ।
ಸ್ಥಾನಂ ಪೆರರ್ಗೆಂಟಿ ಬಗೆವೊಡಪಗತಕಷಟಾ ॥

ಜ್ಞಾನಸ್ವರೂಪನೂ, ಸಿಂಹಪೀಠವಿರಾಜಿತನೂ, ಲೋಕತ್ರಯದೊಡೆಯನೂ, ನಿರ್ಮಲವಾದ ಶುಕ್ಲಧ್ಯಾನವುಳ್ಳವನೂ, ಕಷಾಯದೂರನೂ ಆದ ಸ್ವಾಮಿಯೆ ! ವಿಚಾರ ಮಾಡಿದರೆ

ಮೂರಂ ಲೋಕಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಪ್ರಥಮ ಸ್ಥಾನವು ನಿಮಗಲ್ಲದೆ ಬೇರೆಯವರಿಗೆ ಸಲ್ಲುವುದೆ ? ಇಲ್ಲವೆಂದು ಭಾವವು.

ಟಾಂತಾಕ್ಷರಮನನುಸ್ಮರಿಸೆ ।
ಚಿಂತಿತಫಲಸಿದ್ಧಿಯಕ್ಕುಮೆಂಬರದೆಲ್ಲಂ ॥
ಭ್ರಾಂತು ಭವತ್ಪದಯುಗಮಂ ।
ಚಿಂತಿಸುವಂಗೆಲ್ಲಮಕ್ಕುಮಸ್ತುಮಿತಶತಾ ॥

ಟ ಎಂಬ ಅಕ್ಷರವನ್ನು ಕೊನೆಯಾಗುಳ್ಳ ಮಂತ್ರಗಳನ್ನು ಪಠನೆ ಮಾಡಿದರೆ (ಕೊನೆಯಲ್ಲಿ ವಷಟ್ ಎಂಬ ಪದವು ಸಾಮಾನ್ಯವಾಗಿ ಇಷ್ಟಸಿದ್ಧಿಗಾಗಿ ಜಪಿಸುವ ಮಂತ್ರಗಳ ಕೊನೆಯಲ್ಲಿ ಬರುತ್ತದೆ) ಇಷ್ಟಾರ್ಥಸಿದ್ಧಿಯಾಗುತ್ತದೆಂದು ಹೇಳುವರು. ಅವೆಲ್ಲವೂ ಕೇವಲ ಭ್ರಾಂತಿ. ದುರ್ಗುಣ ರಹಿತನಾದ ನಿಮ್ಮ ಪಾದಪದ್ಮಗಳನ್ನು ಧ್ಯಾನಿಸುವವರಿಗೆ ಎಲ್ಲಾ ಅಭಿಮತ ಫಲಗಳೂ ತಾವಾಗಿ ಸಿದ್ಧಿಸುವುವು.

ಠಕನಳಿಪನೇಳಿಂದ ಮಂ ।
ಚಕನುದ್ಧತನನೃತವಾದಿ ಪಂಚಮಹಾಪಾ ॥
ತಕನೆನಿಸುವಂ ಸಹಸ್ರಾಂ ।
ಬಕಸೇವಿತ ಮುಕ್ತಿವಧುವನೆಂದುಂ ಕೂಡಂ ॥

ಇಂದ್ರ ವಂದಿತನಾದ ಎಲೆಸ್ವಾಮಿಯೆ ! ಮೋಸಗಾರನೂ, ಕೊಲೆಗಾರನೂ, ನಿಂದಕನೂ, ಅಹಂಕಾರಿಯೂ, ಹುಸಿಗನೂ ಆದ ಪಂಚಮಹಾಪಾತಕನೆಂದೆನಿಸುವ ಮನುಷ್ಯನು ಮುಕ್ತಿಯನ್ನು ಹೊಂದಲಾರನು.

ಡಂಬಿಸಿ ಪೆರರೊಡೆವೆಗಳಂ ।
ತಿಂಬುದು ಪೊಲ್ಲೆಂದು ಪೇಳ್ದ ನಿನ್ನಾಗಮಮಂ ॥
ನಂಬದೆ ಜನಪತಿ ಪೆರತಂ ।
ನಂಬಿದವರ್ಗೀಗಮುಕ್ಕು ತುದಿಯೊಳ್ ಗಾಧಂ ॥

ಹೆ ಸ್ವಾಮಿ ! ಮೋಸದಿಂದ ಪರರ ವಸ್ತುಗಳನ್ನಪಹರಿಸಿ ಉಪಯೋಗಿಸಿಕೊಳ್ಳುವುದು ಕೆಟ್ಟದೆಂದು ಹೇಳುವ ನಿನ್ನ ಆಗಮರೂಪವಾದ ಉಪದೇಶವನ್ನು ನಂಬದೆ ಮಿಥ್ಯಾಶಾಸ್ತ್ರಗಳಲ್ಲಿ ನಂಬಿಕೆಯನ್ನಿಟ್ಟು ನಡೆಯುವ ಜನರಿಗೆ ತಾತ್ಕಾಲಿಕವಾಗಿ ಇಷ್ಟಸಿದ್ಧಿಯಂತೆ ತೋರಿದರೂ ಕೊನೆಯಲ್ಲಿ ಕಷ್ಟತರವಾದ ನರಕಾದಿ ದುಃಖಗಳಲ್ಲಿ ನರಳುವಂತಾಗುವುದು.

ಢಕ್ಕಾಮೃದಂಗವಾದ್ಯಲ ॥
ಯಕ್ಕೆ ಕೆಲರ್ ಸಭೆಯೊಳಿರ್ದು ಕುಣಿದುಂ ದೇವ ॥
ತ್ವಕ್ಕಾಟಪರುನ್ನತಿಕೆಯ ।
ನೊಕ್ಕಾವರೇಗೆಯ್ವರಿಂದ್ರವಂದಿತಚರಣಾ ॥

ಥಕ್ಕ, ಮೃದಂಗ ಮೊದಲಾದ ವಾದ್ಯಗಳ ಲಯಕ್ಕೆ (ಅಂದರೆ ಸಂಗೀತಕ್ಕೆ) ಮನಸೋತು ಮರುಳಾಗಿ ಜನರು ಸಂಗೀತಶಾಸ್ತ್ರಾಧಿದೇವತೆಗಳಾದ ಗಂಧರ್ವದೇವತೆಗಳಾಗಿ ಹುಟ್ಟ ಬೇಕೆಂದಪೇಕ್ಷಿಸುವರು. ಇಂದ್ರನಮಸ್ಕೃತನಾದ ಸ್ವಾಮಿಯೆ! ಕೇವಲ ಹೆಚ್ಚಿಕೆಯನ್ನೇ (ಸ್ವರ್ಗಸುಖ) ಅಪೇಕ್ಷಿಸುವ ಇಂತಹ ಜನರು ಇನ್ನೇನನ್ನು ಮಾಡುವರು. (ನಿತ್ಯವಾದ ಮೋಕ್ಷ ಸುಖದ ಸ್ವರೂಪವನ್ನು ತಿಳಿಯಲಾರದ ಜನರು ಶಾಶ್ವತವಲ್ಲದು ಸ್ವರ್ಗಸುಖವೇ ಬಹಳ ದೊಡ್ಡದೆಂದು ತಿಳಿದುಕೊಳ್ಳುವರೆಂದು ಭಾವವು).

ಣಪದಪರ್ಣಕ್ಕಳಿಪಲ್ ।
ತಪಸ್ವಿಗಳ್ಗಾಗರ್ವಾಗದೆಂಬುದು ಜಿನ ನಿ ॥
ನ್ನುಪದೇಶಮಿದಂ ನಂಬದೊ ।
ಡಪವರ್ಗಮನೆಂತುಮೆಯ್ದಲಾರಂ ನಿರುತಂ ॥

ಎಲೆ ಜಿನನೆ! ಣ ಪದ ಪರ್ಣಕ್ಕೆ ಅಂದರೆ ಹಣಕ್ಕೆ ಆಸೆಪಡುವುದು (ದ್ರವ್ಯಲೋಭವು) ತಪಸ್ವಿಗಳಿಗೇಕೆ ಯಾರಿಗೂ ಒಳ್ಳೆಯದಲ್ಲವೆಂಬುದು ನಿನ್ನ ಉಪದೇಶ; ಇದನ್ನು ನಂಬದೇ ಹೋಗುವವನು ಎಂದೂ ಯಾವ ರೀತಿಯಲ್ಲಿಯೂ ಮೋಕ್ಷ ಸ್ಥಾನವನ್ನು ಹೊಂದಲಾರನು.

ತವಿಸುಗುಮಘಂಗಳಂ ಸಂ ।
ಭವಿಸುಗಂವಿಷ್ಟಾರ್ಥಸಿದ್ಧಿ ನಿಮಗೆರಗಿದೊಡೀ ॥
ಭವದೊಳ್ ತಾನಿರದಕ್ಕುಂ ।
ಭುವನತ್ರಯವಂದ್ಯ ಮೋಕ್ಷಲಕ್ಷ್ಮೀನಾಥಾ ॥

ಲೋಕತ್ರಯವಂದ್ಯನೂ ಮೋಕ್ಷಲಕ್ಷ್ಮಿಗೊಡೆಯನೂ ಆದ ಸ್ವಾಮಿಯೆ! ನಿಮ್ಮಡಿಗಳಿಗೆ ನಮಸ್ಕರಿಸಿದರೆ ಪಾಪ ಸಮೂಹವು ನಾಶವಾಗುವುದು. ಐಹಿಕವಾದ ಸಮಸ್ತವಾದ ಇಷ್ಟಾರ್ಥಗಳೂ ಖಂಡಿತವಾಗಿಯೂ ಸಿದ್ಧಿಸುವುವು.

ಥಂಚಿತ್ಪದಂ ಕಕಾರಾ ।
ದ್ಯಂಚಿತವಾಗಿರೆ ಸಮಸ್ತವಸ್ತುವನರಿದುಂ ॥
ಕಾಂಚನಪೀಠಾಧಿಷ್ಠಿತ ।
ನೀಂ ಚಿರ ಪೇಳಿಂತು ಸರ್ವವಿದನ್ವೈರ್ವಿಮದಾ ॥

ಸುವರ್ಣಮಯ ಪೀಠದಲ್ಲಿ ಪ್ರಕಾಶಮಾನವಾಗಿರುವ ಸ್ವಾಮಿಯೆ! ಥಂಚಿತ್ಪದಂ ಕಕಾರಾದ್ಯಂಚಿತ ಎಂದರೆ ಕಥಂ ಚಿತ್, ಹೇಗಾದರೂ, ಕಷ್ಟಪಟ್ಟಾದರೂ ಸಮಸ್ತವಸ್ತುಗಳ ಯಥಾವತ್ಸ್ವರೂಪವನ್ನು ತಿಳಿದು, ಸರ್ವಜ್ಞನೂ, ನಿರ್ಮದನೂ, ಆಗಿ, ಶಾಶ್ವತವಾದ ಮುಕ್ತಿಪ್ರಾಪ್ತನಾದೆಯಲ್ಲವೆ.

ದಮೆಯುಂ ಕ್ಷಮೆಯುಂ ಪುಣ್ಯಾ ।
ಶ್ರಮಂಗಳಿಂದರಿದನುಷ್ಠಿಸಲ್ ಸಿದ್ಧಂ ಸಂ ॥
ಯಮಮೆಂದು ಪೇಳ್ವೆ ನಿನ್ನೀ ।
ಸಮಯಮೆ ಸಮಯಂ ವಿಶುದ್ಧಕೇವಲಬೋಧಾ ॥

ನಿರ್ಮಲವಾದ ಕೇವಲಜ್ಞಾನದಿಂದ ಕೂಡಿರುವ ಸ್ವಾಮಿಯೆ ! ಕ್ಷಮಾಗುಣವೂ, ಸಹಿಷ್ಣುತೆಯೂ ಪುಣ್ಯಪ್ರಾಪ್ತಿ ಕಾರಣಗಳೆಂದು ತಿಳಿದು ಆಚರಿಸಿದರೆ ಸಂಯಮವು (ತಪಸ್ಸು) ಸಿದ್ಧಿಸುವುದು ಎಂದು ಉಪದೇಶಿಸುವ ನಿನ್ನ ಧರ್ಮವೇ (ಸಮ್ಯಗ್ದರ್ಶನಜ್ಞಾನ ಚಾರಿತ್ರರೂಪವಾದ—ಆತ್ಮನನ್ನು ಶರೀರ ದಿಂದ ಬೇರೆಯಾದವನೆಂದು ಹೇಳುವ ಭೇದವಿಜ್ಞಾನ—ಆತ್ಮನ ನೈಜವಾದ ಸ್ವರೂಪವನ್ನು ಬೋಧಿಸುವ) ಧರ್ಮವು. (ಏಕೆಂದರೆ ಇದಕ್ಕಿಂತ ಉತ್ತಮವಾದುದಿನ್ನೊಂದಿಲ್ಲವೆಂದು ಭಾವವು).

ಧನಕನಕಸಮೃದ್ಧಿಗೆ ಬೇ।
ರೆ ನೋಂಪ ಸರಿಕ್ಲೇಶಮುತ್ತದಾವುದೊ ಶುಭಭಾ॥
ವನೆ ಯುಳ್ಳೊಡಮುವೆ ಮಾಡುಗು।
ಮನೇಕಮಿನ್ನುಳಿದುವೇವುವಾಶಾವಸನಾ॥

ಎಲೆ ಆಶಾವಸನ ಎಂದರೆ ದಿಕ್ಕುಗಳೇ ವಸ್ತ್ರಗಳಾಗುಳ್ಳ (ದಿಗಂಬರನಾದ) ಸ್ವಾಮಿಯೆ ! ಧನಕನಕಗಳ ಸಮೃದ್ಧಿಗೆ ಅಂದರೆ ಸಂಪತ್ಸಮೃದ್ಧಿಯನ್ನು ಹೊಂದಲು, ಉಪವಾಸಾದಿ ಗಳಿಂದ ದೇಹವನ್ನು ಕ್ಲೇಶಕ್ಕೆ ಗುರಿಮಾಡಬೇಕಾಗುವ ನೋಂಪಿ ವ್ರತ ಮೊದಲಾದುವುಗಳನ್ನು ಮಾಡಬೇಕೇಕೇ ? ಮನಸ್ಸಿನಲ್ಲಿ ಶುಭಭಾವನೆ (ವಿಶುದ್ಧ ಪರಿಣಾಮ) ಹೊಂದಿದ್ದರೆ ಅದೇ ಎಲ್ಲಾ ಸಂಪತ್ತುಗಳನ್ನೂ ಉಂಟುಮಾಡುವುದೆಂದ ಮೇಲೆ ಬೇರೆ ಉಪಾಯಗಳಿಂದ ಪ್ರಯೋಜನವೇನು ?

ನತದಿವಿಜಮುಕುಟರತ್ನ ।
ದ್ಯುತಿವಿಲಸಿತಪಾದಪದ್ಮಪಾಲಿತಲೋಕ ॥
ತ್ರಿತಯ ನಿನಗಲ್ಲದೇಕ ।
ಸ್ಥಿತಿಯಿಲ್ಲಾರ್ಗಂ ಸ್ವಭಾವಸೌಂದರರೂಪಾ ॥

ಸ್ವಭಾವವಾಗಿ ಅತ್ಯಂತ ಸುಂದರನಾದ ಸ್ವಾಮಿಯೇ! ನಮಸ್ಕರಿಸುವ ದೇವತೆಗಳ ಕಿರೀಟಗಳಲ್ಲಿನ ರತ್ನಗಳ ಕಾಂತಿಯಿಂದ ಪ್ರಕಾಶಮಾನವಾಗಿರುವ ಪಾದಗಳುಳ್ಳವನೂ, ಮೂರು ಲೋಕಗಳನ್ನು ರಕ್ಷಿಸುವವನೂ ಆದ ನಿನ್ನಲ್ಲಿ ಮಾತ್ರ 'ಏಕಸ್ಥಿತಿ' ಯೆಂದರೆ ನಿರ್ವಿಕಾರತ್ವವು ಇರುವುದು; ಮತ್ತಾರಲ್ಲಿಯೂ ಇಲ್ಲ.

ಪವನಾಭಿಘಾತದಿಂದಂ ।
ಬುವಾಹತತಿ ಕರಗುವಂತೆ ನಿನ್ನೀ ॥
ಸ್ತವ ಭೇಷಜದಿಂದಘ ಕರ ।
ಗುವುದಲ್ತೆ ವಿಶೇಷ ವಿಗತಮಲಕಲಿಲಕಥಾ ॥

ಸಮಸ್ತ ದೋಷಗಳಿಂದಲೂ ದೂರವಾಗಿರುವ ಜನೇಶ್ವರನೆ! ಗಾಳಿಯ ಹೊಡೆತದಿಂದ ಮೋಡಗಳ ಸಮೂಹವು ಛಿದ್ರಛಿದ್ರವಾಗಿ ಒಡೆದು ಕರಗಿಹೋಗುವಂತೆ ನಿನ್ನ ಸ್ತೋತ್ರರೂಪವಾದ ಔಷಧದಿಂದ ಪಾಪಸಮೂಹವೆಲ್ಲವೂ ಕರಗಿ ನಾಶವಾಗಿ ಹೋಗುವುದು ಆಶ್ಚರ್ಯವಾದುದಾಗಿದೆ.

ಘಳವಿಲ್ಲ ಬರಿದೆ ಕೋಟಲೆ ।
ಗೊಳಲೇಕೆ ಜಿನೇಂದ್ರ ಪೆರವು ಸಮಯದ ಶಾಸ್ತ್ರಂ ॥
ಗಳನೋದಿ ನೆಟ್ಟನಾನವ ।
ರೊಳಗರಿದೆಂ ವಿನಯವಿನತಸುರನಿಕುರುಂಬಾ ॥

ಭಕ್ತಿಯುತರಾದ ದೇವತೆಗಳ ಸಮೂಹದಿಂದ ನಮಸ್ಕರಿಸಿಕೊಳ್ಳುವ ಸ್ವಾಮಿಯೆ ! ನಿನ್ನ ಉಪದೇಶವನ್ನು ಕೇಳಿದ ನಾನು ಲೋಕದಲ್ಲಿರುವ ಎಲ್ಲಾ (ಜೈನೇತರ) ಶಾಸ್ತ್ರಗಳನ್ನೂ ಓದಿ ತೊಂದರೆಪಡುವುದು ನಿಷ್ಫಲವೆಂದು ತಿಳಿದುಕೊಂಡೆನು. ಅಂದರೆ ಲೋಕದ ಎಲ್ಲಾ ಶಾಸ್ತ್ರಗಳಿಗಿಂತಲೂ ಜೈನ ಶಾಸ್ತ್ರವೇ ಅತ್ಯಂತ ಶ್ರೇಷ್ಠವಾದುದೆಂದು ತಿಳಿದುಕೊಂಡೆನು.

ಬಾರರದ ಭವವಿಲ್ಲ ನಿರಾ ।
ಧಾರಂ ಮತ್ತದರದೆಸೆಗೆ ಪೇಸಿದೆನದರಿಂ ॥
ದಾರಯ್ವೊಡಸಾರಂ ಸಂ ।
ಸಾರಂ ಸುರಭುವನಭವನಮೂಲಸ್ತಂಭಾ ॥

ಲೋಕಕ್ಕೇ ಮೂಲಾಧಾರನಾದ ಸ್ವಾಮಿಯೇ ! ಈ ಸಂಸಾರದಲ್ಲಿ ಸುತ್ತುತ್ತಿರುವ ಪ್ರಾಣಿಗಳು ಎಂತೆಂತಹ ನೀಚವಾದ ಯೋನಿಗಳಲ್ಲಿ ಹುಟ್ಟುತ್ತಿವೆಯೆಂಬುದಕ್ಕೆ ಒಂದು ನಿಯಮವಿಲ್ಲ. ಜೀವಗಳು ಮನುಷ್ಯಗತಿಯಿಂದ ನಾಯಿ, ಹಂದಿ ಕ್ರಿಮಿಕೀಟ ಮೊದಲಾದ ಅತ್ಯಂತ ತುಚ್ಛವಾದ ಭವ

ಗಳಲ್ಲಿಯೂ ಹುಟ್ಟುತ್ತವೆ. ಇದೆಲ್ಲವನ್ನೂ ಕೇಳಿ ಮನಸ್ಸಿಗೆ ಅತಿಯಾಗಿ ಹೇಸಿಕೆಯುಂಟಾಗಿದೆ. ಯೋಚಿಸಿ ನೋಡಿದರೆ ಸಂಸಾರವು ಅತಿನಿಸ್ಸಾರವಾದುದು ಎಂದರೆ ಸ್ವಲ್ಪವೂ ಸುಖವಿಲ್ಲದ್ದೆಂದೂ ಗೊತ್ತಾಗುತ್ತದೆ.

ಭವವಾರಾ ಯೊಳಳ್ದ ।
ರ್ದ್ದವರಂ ಪಿಡಿದೆತ್ತುನಂತು ಪೆಱವೆತ್ತಲ್ಕಾ ॥
ರ್ಪವೆ ನಿನ್ನ ಧರ್ಮವೊಂದೆ ।
ತ್ತುಪ್ರೊಡೆತ್ತುಗು ತದಿಯೊಳಖಿಳಗುಣಗಣಧಾಮಾ ॥

ಸಮಸ್ತ ಸದ್ಗುಣಸಮೂಹಕ್ಕೆ ಸ್ಥಾನನಾಗಿರುವ ಸ್ವಾಮಿಯೆ! ಈ ಭವಸಮುದ್ರದಲ್ಲಿ ಮುಳುಗಿಹೋಗಿರುವವರನ್ನು ಅಲ್ಲಿಂದ ಹೊರಕ್ಕೆ ತೆಗೆದು ರಕ್ಷಿಸುವವರಾರೂ ಇಲ್ಲ. ಎಂದಾದರೂ ಅಂತಹವರು ಸಂಸಾರ ಸಮುದ್ರದಿಂದ ಪಾರಾಗಬೇಕಾದರೆ ನಿನ್ನ ಧರ್ಮವೊಂದೇ ಅಂತಹವರನ್ನು ಎತ್ತುವ ಸಾಮರ್ಥ್ಯವುಳ್ಳದಾಗುತ್ತದೆ. (ಅಂದರೆ ಸಂಸಾರದಿಂದ ಬಿಡುಗಡೆ ಹೊಂದಲು ಜಿನಧರ್ಮವೊಂದೇ ಶರಣು; ಮತ್ತಾವುದೂ ಇಲ್ಲ.

ಮನವೊಸೆದೆರಡಿಲ್ಲದೆ ಚಿ ।
ತ್ತನಿರೋಧಂಗೆಯ್ದು ಕಿರಿದು ಪೊಳ್ತುಂ ಶುಭಭಾ ॥
ವನೆಯಿಂ ಭವತ್ಪದಾರಾ ।
ಧನವಿಧಿಯಿಂ ನೆಗಳೆ ಪಡೆಯಲಕ್ಕುಗಯಂ ॥

ಹೇ ಸ್ವಾಮಿ ! ಮನಸ್ಸನ್ನು ಅತ್ತಿತ್ತ ಹರಿಯಗೊಡದೆ ಎಂದರೆ ಎರಡನೇ ಯೋಚನೆಯಿಲ್ಲದೆ ಕೇವಲ ನಿನ್ನ ಪಾದಾರವಿಂದಗಳನ್ನು ಸ್ವಲ್ಪ ಹೊತ್ತಾದರೂ ಶುದ್ಧವಾದ ಭಕ್ತಿಭಾವದೊಡನೆ ಕೂಡಿ ಆರಾಧಿಸುವವನು ಅಂದರೆ ಪೂಜಿಸಿ ಧ್ಯಾನಿಸುವವನು ಮೋಕ್ಷವನ್ನು ಹೊಂದಲು ಸಮರ್ಥನಾಗುತ್ತಾನೆ.

ಯಮನಿಯಮಸ್ವಾಧ್ಯಾಯ ।
ಕ್ರಮದಿಂದಂನೆಗಳ್ದೊಡಲ್ಲದಾಗದು ಪಡೆಯ ॥
ಲ್ಕಮರತ್ವಮನೆಂಬುದು ಜಿನ ನಿ ।
ನ್ನಮತಂ ಪೆರರ್ಗಿಲ್ಲ ಬಗೆಯೆ ಲೋಕಾಧಾರಾ ॥

ಲೋಕಾಧಾರನಾದ ಸ್ವಾಮಿಯೆ ! ಸ್ನಾನಮಾಡಿ, ಚಿತ್ತಶುದ್ಧಿಯಿಂದ ಕೂಡಿ ಕ್ರಮವಾದ ರೀತಿಯಲ್ಲಿ ಶಾಸ್ತ್ರಾಧ್ಯಯನ ಮಾಡಿ ಜ್ಞಾನಾರ್ಜನೆ ಮಾಡಿಕೊಂಡು ಶುದ್ಧ ಚಾರಿತ್ರದಲ್ಲಿ ನಡೆದರೆ ಮಾತ್ರ ಸ್ವರ್ಗಾದಿ ಸುಖಗಳನ್ನು ಹೊಂದಬಹುದೆಂಬುದೇ ನಿನ್ನ ಉಪದೇಶವಾಗಿದೆ. ಯೋಚಿಸಿದರೆ ಹಾಗೆ ಮಾಡದವನಿಗೆ ಸ್ವರ್ಗಪ್ರಾಪ್ತಿಯಿಲ್ಲವೆಂದೇ ತೋರುತ್ತದೆ.

ರಸನೇಚ್ಛೆಯೊಳಾಡುವ ದು ।
ರ್ವ್ಯಸನಿಗಳುಂ ತಮಗೆ ಧರ್ಮಮುಂಟೆಂದೆಂಬರ್ ॥
ಪುಸಿನುಡಿಯಾ ಧರ್ಮಂ ಭಾ ।
ವಿಸುವೊಡೆ ಜಿನನಾಥ ನೀನೆ ಪೇಳ್ದಂತೆ ವಲಂ ॥

ಹೇ ಸ್ವಾಮಿ ! ನಾಲಿಗೆಯ ರುಚಿಗೊಳಗಾಗಿ ಅಭಕ್ಷ್ಯ
ವಸ್ತುಸೇವನೆ ಮೊದಲಾದ ದುಷ್ಟವ್ಯಸನಗಳಿಗೆ ಸಿಕ್ಕಿಬಿದ್ದು
ವಿಪರೀತಾಚರಣೆ ಮಾಡುತ್ತಿರುವ ಲೋಕದ ಕುತ್ಸಿತರಾದ
ಜನರು ತಮಗೂ ಧರ್ಮವುಂಟೆಂದು ಹೇಳುವರು. ಚನ್ನಾಗಿ
ಯೋಚಿಸಿದರೆ ಅವರು ಹೇಳುವ ಆ ಮಾತು ಶುದ್ಧ ಸುಳ್ಳು.
ನೀವು ಉಪದೇಶಿಸಿರುವುದೇ ನಿಜವಾದ ಧರ್ಮವೆಂದು ತಿಳಿದು
ಬರುತ್ತದೆ. (ಧರ್ಮದ ಹೆಸರಿನಲ್ಲಿ ಯಜ್ಞಯಾಗಾದಿಗಳನ್ನು
ಮಾಡಿ ಪ್ರಾಣಿಹಿಂಸೆ ಮೊದಲಾದ ದುಷ್ಟಾಚರಣೆ ಮಾಡುವ
ಜನರು ಧರ್ಮಭ್ರಷ್ಟರೆಂದು ಭಾವವು)-

ಲಂಪಳಿಕೆಯಸುಳಿದೇತರೊ ।
ಳಂ ಪೊರ್ದ್ದದೆ ವಿಷಯಸುಖದ ನಿಸ್ಪೃಹತೆಯನಾ ॥
ವಂ ಪಡೆಯಲಾರ್ಪನಾ ಮನು ।
ಜಂ ಪಡೆಗುಂ ಪರಮಪದಮನರ್ಹದ್ದೇವಾ ॥

ಹೇ ಅರ್ಹಂತನೆ ! ಮೋಹನೀಯ ಕರ್ಮಕ್ಕೆ ಸಿಕ್ಕದೆ
ಯಾವ ವಸ್ತುವಿನಲ್ಲಿಯೂ ಮೋಹವನ್ನಿಡದೆ ವಿಷಯ ಸುಖದಲ್ಲಿ
ಉದಾಸೀನನಾಗಿ ಇಂದ್ರಿಯ ಸುಖವಿಮುಖನಾಗಬಲ್ಲವನಾದ
ಮನುಷ್ಯನು ಮೋಕ್ಷವನ್ನು ಹೊಂದುವನು. (ಮನುಷ್ಯನು
ನಿರ್ಮೋಹನಾಗಿ ಸಂಸಾರದ ಎಲ್ಲಾ ಸುಖಗಳಲ್ಲೂ ವೈರಾಗ್ಯ
ವನ್ನು ಹೊಂದಿದರೆ ಅಂಥವನು ಚಿತ್ತಶುದ್ಧಿಯನ್ನು ಹೊಂದಿ
ಮೋಕ್ಷವನ್ನು ಪಡೆಯಲು ಶಕ್ತನಾಗುತ್ತಾನೆ).

ವಾಸವವಂದ್ಯ ಜಗತ್ತ್ರಯ
ಭಾಸುರಯಶ ವೀತರಾಗ ದುಷ್ಕೃತಬಳಸಂ ॥
ತ್ರಾಸಕರಚರಿತ ನೀನೆ ಸಂ।
ರಾಸುರರೊಳ್ ಪಿರಿಯ ಸಮ್ಯ್ರತಪನಿತಾಧೀಶಾ ॥

ಮೋಕ್ಷ ಲಕ್ಷ್ಮಿಗೊಡೆಯನಾದ ಸ್ವಾಮಿಯೆ ! ನೀನು ಇಂದ್ರಾದಿಗಳಿಂದ ನಮಸ್ಕರಿಸಿಕೊಳ್ಳುವವನೂ, ಮೂರು ಲೋಕಗಳಲ್ಲೂ ವ್ಯಾಪಿಸಿರುವ ಯಶಸ್ಸುಳ್ಳವನೂ, ರಾಗದ್ವೇಷ ರಹಿತನೂ, ಪಾಪಸಮೂಹಗಳ ಬಲವನ್ನು ನಾಶಮಾಡುವಂತಹ ವಿಶುದ್ಧ ಚಾರಿತ್ರವುಳ್ಳವನೂ ಆಗಿರುವುದರಿಂದ ಸುರಾಸುರರೆಲ್ಲರಲ್ಲಿಯೂ ನೀನೆ ಪಿರಿಯನು ಎಂದರೆ ದೊಡ್ಡವನು (ಶ್ರೇಷ್ಠನು).

ಶಾರದನೀರದ ತುಹಿನಾ।
ಕಾರಯಶೋವ್ಯಾಪ್ತಸಕಲಲೋಕತ್ರಿತಯಾ ॥
ಧಾರಪದಕಮಲ ನಿನ್ನಳ।
ವಾರಳವಾರಯ್ದು ನೋಡೆ ವಿಗತದ್ವೇಷಾ ॥

ರಾಗದ್ವೇಷ ರಹಿತನಾದ ಸ್ವಾಮಿಯೆ ! ಶರತ್ಕಾಲದ ಮೇಘಗಳಂತೆ, ಮಂಜಿನ ಸಮೂಹದಂತೆ ಅತ್ಯಂತ ಶುಭ್ರವಾದ ಯಶಸ್ಸುಳ್ಳವನೂ, (ಲೋಕಕ್ಕೆಲ್ಲಾ ನಿತ್ಯ ಸುಖವನ್ನು ಹೊಂದುವ ಉಪಾಯವನ್ನು ತಿಳಿಸಿದುದರಿಂದ) ಮೂರು ಲೋಕಗಳಿಗೂ ಆಧಾರಭೂತನೂ ಆಗಿರುವ ನಿನ್ನ ಶಕ್ತಿಯು

ಳವನ್ನು ಯೋಚಿಸಿ ತಿಳಿಯಲು ಯಾವ ಮನುಷ್ಯನಿಗೆ
ಾನೆ ಸಾಧ್ಯವಾದೀತು ? ಯಾರಿಗೂ ಸಾಧ್ಯವಿಲ್ಲ.

ಷಡಯನಕುಲದಂತಿರೆ ಕ ।
ರ್ಪಡಿದೊಪ್ಪುವುದರ್ಹ ನಿನ್ನ ಪದಪಂಕರುಹ ॥
ಕ್ಕೊಡನೆರಗಿದಮರಸಮಿತಿಯ ।
ಡೆಂಗುವೆತ್ತಳಕಪಙ್ಕ್ತಿ ಸಹಜವಿಳಾಸಾ ॥

ಸಹಜ ಸುಂದರನಾದ ಸ್ವಾಮಿಯೆ ! ನಿನ್ನ ಪಾದಗಳು
ನಮಸ್ಕಾರ ಮಾಡುವ ದೇವತೆಗಳ ಮುಂಗುರುಳ ಕೂದಲು
ಗಳಿಂದ (ನಿಮ್ಮ ಪಾದವೆಂಬ) ಕಮಲಗಳಿಗೆ ಮುತ್ತಿರುವ
ಕಪ್ಪಾದ ದುಂಬಿಗಳ ಸಾಲೋ ಎಂಬತೆ ಹೊಳೆಯುತ್ತವೆ.

ಸಹಜಗುಣಮಣಿವಿಭೂಷಣ
ಹಹಳೋದ್ಯದ್ದೀಪ್ತಿಯಿಂ ತ್ವದೀಯಾಪಘನಂ ॥
ಬಹುರತ್ನರಚಿತಸುರನಗ ।
ಮಹಿಮೆಯನಾಳ್ದತ್ತು ವಿನತಸುರಸಂದೋಹಾ ॥

ನಮಸ್ಕರಿಸುತ್ತಿರುವ ದೇವತೆಗಳ ಸಮೂಹವುಳ್ಳ
ಸ್ವಾಮಿಯೆ ! ನಿನ್ನಲ್ಲಿ ಸಹಜವಾಗಿರುವ ಗುಣಗಳೆಂಬ
ಆಭರಣಗಳಿಂದ ಶೋಭಾಯಮಾನವಾಗಿರುವ ನಿನ್ನ ಶರೀರವು
ಬಹು ರತ್ನಗಳಿಂದ ಕೂಡಿ ಹೊಳೆಯುತ್ತಿರುವ ಮೇರು
ಪರ್ವತದ ಸೌಂದರ್ಯವನ್ನೂ ಮೀರಿಸುತ್ತಿದೆ.

ಹಳಕುಳಿಶಕಳಶವುಂಕುಶ।
ಜಳಜಾಂಕಿತಪಾದಪದ್ಮ ಪಾಲಿತಲೋಕಂ॥
ಗಳನುಮೆರಗಿಸುವ ನಿನ್ನೊಂ।
ದಳವನದೇನೆಂದು ಪೊಗಳ್ವೆನಿಕ್ಷ್ವಾಕುಕುಳಾ॥

ಇಕ್ಷ್ವಾಕು ಕುಲಶ್ರೇಷ್ಠನಾದ ಸ್ವಾಮಿಯೆ! ನೇಗಿಲು, ಕೊಡಲಿ, ಕಳಶ, ಅಂಕುಶ, ತಾವರೆ ಮೊದಲಾದ ಆಕಾರ ಯುಕ್ತವಾದ ಶುಭ ಲಕ್ಷಣಗಳಿಂದ ಕೂಡಿದ ನಿನ್ನ ಅಡಿದಾವರೆಗಳು ಮೂರು ಲೋಕಗಳಿಂದಲೂ ನಮಸ್ಕರಿಸಿಕೊಳ್ಳುತ್ತಿರುವುವು. ಈ ನಿನ್ನ ಶಕ್ತಿಯನ್ನು ನಾನು ಏನೆಂದು ಹೊಗಳಬಲ್ಲೆನಂ? ಹೊಗಳಲಾರೆನು.

ಳಕ್ಷಣಲಕ್ಷಿತ ಸರ್ವವಿ।
ಚಕ್ಷಣ ತಾತ್ಪರ್ಯದಿಂ ಜಗತ್ತ್ರಯದೊಳಗಾ॥
ನೀಕ್ಷಿಸಿದೆಂ ನಿನ್ನಂತು ಬ।
ಹುಕ್ಷವುರಣವಿಲ್ಲ ಮೋಕ್ಷಲಕ್ಷ್ಮೀವಕ್ಷಾ॥

ಮೋಕ್ಷ ಲಕ್ಷ್ಮಿಯನ್ನು ವಕ್ಷದಲ್ಲಿ ಧಾರಣೆ ಮಾಡಿರುವ ಸ್ವಾಮಿಯೆ! ಸಮಸ್ತ ಶುಭ ಲಕ್ಷಣಗಳಿಂದ ಕೂಡಿದವನೂ ಲೋಕತ್ರಯಗಳಲ್ಲಿರುವ ಎಲ್ಲಾ ವಸ್ತುಗಳ ಭೂತಭವಿಷ್ಯ ವರ್ತಮಾನ ಕಾಲಗಳಲ್ಲಿನ ಎಲ್ಲಾ ಪರ್ಯಾಯಗಳನ್ನೂ ಯಥಾವತ್ತಾಗಿ ತಿಳಿಯುವ ಶಕ್ತಿಯುಳ್ಳ ಸರ್ವಜ್ಞನೂ ಆದ

ನಿನಗೆ ಸಮಾನರಾದವರೇಕೆ ನಿನ್ನ ಸರ್ವಶಕ್ತಿ (ಕರ್ಮಗಳನ್ನು ಜಯಿಸುವುದರಲ್ಲಿ ನೀನು ತೋರಿಸಿದ ತಾಳ್ಮೆ ಮತ್ತು ಸಹಿಷ್ಣುತೆ) ಯ ಒಂದು ಅಣುವನ್ನಾದರೂ ಹೊಂದಿರುವ ಮನುಷ್ಯನು ಅತಿದುರ್ಲಭರೆಂದು ಚನ್ನಾಗಿ ತಿಳಿದು ಬರುತ್ತದೆ.

ಕ್ಷತ್ರಿಯಕುಲದೊಳ್ ಪುಟ್ಟಿ ಜ ।
ಗತ್ತ್ರಯಪತಿ ನಿನಗೆ ಭಕ್ತನಾದಂದೇಕ ॥
ಚ್ಛತ್ರಚ್ಛಾಯೆಯಿನಖಿಳ ಧ ।
ರಿತ್ರಿಯನಾಳಲ್ಕೆ ಪಡೆಗುಮುಳಿದಂದಾರಂ ॥

ಹೇ ಸ್ವಾಮಿ ! ಕ್ಷತ್ರಿಯ ಕುಲದಲ್ಲಿ ಹುಟ್ಟಿದ ರಾಜನಾಗಿದ್ದರೂ ನಿನ್ನಲ್ಲಿ ಅತ್ಯಂತ ಭಕ್ತಿಯುಳ್ಳವನಾದರೆ ಮಾತ್ರ ಏಕಚ್ಛತ್ರಾಧಿಪತಿಯಾಗಿ (ಸಕಲಚಕ್ರವರ್ತಿಯಾಗಿ) ಷಟ್ಖಂಡ ಭೂಮಿಯನ್ನಾಳಲು ಶಕ್ತನಾಗುವನು. ಹಾಗಿಲ್ಲದಿದ್ದರೆ ಎಂದೂ ಅಂತಹ ರಾಜನು ಚಕ್ರವರ್ತಿತ್ವವನ್ನು ಹೊಂದಲಾರನು.

ಳೊಬ್ಬಿನ ಸೊಡರಿಂ ಚರುವಿಂ ।
ಚಿಬ್ಬುಂ ಬೊಯ್ದಲೆಯಿಲವರಿನಕ್ಷತೆಯಿಂ ಮ ॥
ಚ್ಚುಬ್ಬರಿಸಿ ಜಿನರನರ್ಚಿಸೆ ।
ನಿಬ್ಬರಮಾಗಿರ್ದ ನರಕಗತಿಯೊಳ್ ಬೀೞಂ ॥

ಹೇ ಸ್ವಾಮಿ ! ಜಲ, ಗಂಧ, ಅಕ್ಷತೆ, ಪುಷ್ಪ, ಪ್ರಕಾಶಮಾನವಾದ ದೀಪ, ಧೂಪ, ಫಲ ಇವುಗಳಿಂದಾರು ನಿನ್ನಪಾದ

ಕಮಲಗಳನ್ನು ಭಕ್ತಿಪೂರ್ವಕವಾಗಿ ಪೂಜಿಸುವರೋ ಅಂಥಹ ವರು ಎಂದೂ ಘೋರವಾದ ನರಕಗತಿಗೆ ಬೀಳುವುದಿಲ್ಲವು.

ಱಿಕೆಂತಂಬರಂ ಬುಧರ್ ಪೊಗ।
ೞ್ವಂತಕ್ಕರಮಾಲೆಯಂ ಜಿನಸ್ತವನದೊಳೋ॥
ರಂತಿದೆ ಪೇೞ್ದಿಂ ಹಿಮಸೇ।
ತ್ವಂತವರಂ ಪರವಿನಂ ಕುರುಳ್ಗೆ ಳಸವಣಂ॥

ಹೇ ಸ್ವಾಮಿ! ಱ ಎಂಬಕ್ಷರವು ಕೊನೆಯಾಗುಳ್ಳ ಅಕ್ಷರ ಮಾಲೆಯುನ್ನು ಜಿನೇಶ್ವರನ ಸ್ತೋತ್ರ ರೂಪವಾಗಿ ವಿದ್ವಾಂಸರು ಮೆಚ್ಚಿ ಹೊಗಳುವಂತೆ ಕುರುಳ್ಗಳಸವಣನೆಂಬ ಬಿರುದುಳ್ಳ ಪೊನ್ನನು ಆಸೇತು ಹಿಮಾಚಲಪರ್ಯಂತ ವ್ಯಾಪಿಸುವಂತೆ ವರ್ಣಿಸಿರುವನು.

ಮಱಿಕೊಳ್ಗೆ ಧಾನ್ಯವರ್ಗದ।
ಬೆಳೆ ಪೆರ್ಚ್ಚುಗೆ ಸತ್ಯಶೌಚರಪ್ಪರ್ ಮನುಜರ್॥
ಬೆಳಗುವುದು ಜೈನಧರ್ಮಂ।
ಜಳನಿಧಿ ಚಂದ್ರಾರ್ಕತಾರೆ ಧರೆಯುಳ್ಳೆನೆಗಂ॥

॥ ಜಿನಾಕ್ಷರಮಾಲೆ ಸಮಾಪ್ತಂ ॥

ಲೋಕದಲ್ಲಿ ಮಳೆಗಳು ಸರಿಯಾದ ಕಾಲಗಳಲ್ಲಿ ಬೀಳಲಿ, ಧಾನ್ಯವರ್ಗವು ಅತ್ಯುತ್ತಮವಾಗಿ ಬೆಳೆದು ಹೆಚ್ಚಲಿ. ಜನರು ಸತ್ಯವಂತರೂ ಸದಾಚಾರಿಗಳು ಆಗಲಿ. ಉತ್ತಮವಾದ ಜೈನ

ಧರ್ಮವು ಆಚಂದ್ರಾರ್ಕತಾರೆಯಾಗಿ ಅಂದರೆ ಚಂದ್ರ, ಸೂರ್ಯ, ನಕ್ಷತ್ರಗಳಿರುವವರೆಗೂ ಲೋಕದಲ್ಲಿ ಬೆಳಗಲಿ (ವೃದ್ಧಿಹೊಂದಿ ಜಯಶೀಲವಾಗಲಿ).

ಇಂತು ಪೊನ್ನಮಹಾಕವಿ ವಿರಚಿತ ಜಿನಾಕ್ಷರಮಾಲೆ
ಕನ್ನಡ ಅನುವಾದವು ಸಂಪೂರ್ಣವಾದುದು.

॥ ಭದ್ರಂ ಶುಭಂ ಮಂಗಳಂ ॥

★ ★ ★

ಶುಭಾಶಯ

ಸಕಲ ಜನಕ್ಕೆಲ್ಲ ಸುಖ ಶಾಂತಿ ದೊರೆಯಲಿ, ಆಳುವ ಅರಸರು ಧರ್ಮಾನುರಾಗಿಗಳಾಗಿ ಪ್ರಭಾವದಿಂದ ಪ್ರಜೆಗಳನ್ನು ಕಾಪಾಡಲಿ, ಕಾಲ ಕಾಲಕ್ಕೆ ಸರಿಯಾಗಿ ಮಳೆಯಾಗಲಿ, ರೋಗ ರುಜಿನಗಳೆಲ್ಲ ನಾಶವಾಗಲಿ, ಈ ಜಗತ್ತಿನಲ್ಲಿ ಬರಗಾಲವು ಎಂದೂ ಬರದಿರಲಿ, ಮಾರಿರೋಗ ಇಣುಕದಿರಲಿ, ಈ ರೀತಿ ಸಕಲರಿಗೂ ಸುಖ ನೀಡುತ್ತ ಜಿನೇಂದ್ರನ ಧರ್ಮಚಕ್ರವು ಸದಾ ತಿರುಗುತ್ತಿರಲಿ.

ಬೆಲೆ ರೂ. 10-00

713, ರತ್ನತ್ರಯ ಪ್ರಿಂಟರ್ಸ್, ಕುವೆಂಪುನಗರ, ಮೈಸೂರು-23

ಯಕ್ಷ-ಯಕ್ಷಿ	....	20
ವೀರ ಜಿನೇಂದ್ರ ಚರಿತೆ	—	8
ಕವಿವರ ಕಾಮಧೇನು	....	55
ಜಿನಪದಸಾರ	....	30
ಶ್ರಾವಕಾಚಾರ	....	50
ದಾನಚಿಂತಾಮಣಿ ಅತ್ತಿಮಬ್ಬೆ	....	12
ಜೈನರ ಹಬ್ಬಗಳು	....	15
ಶ್ರೀ ಸಿದ್ಧಸಾಗರ ಚರಿತೆ	....	25
ಜೈನ ಧರ್ಮದಲ್ಲಿ ಮಾನವೀಯತೆ	....	16
ಕಂಬದಹಳ್ಳಿ	....	35
ಸಮುಪ್ರಭಾವನ	....	30
ಶ್ರೀಮತಿ	....	12
ಜೈನ ಹಬ್ಬಗಳು	....	15
ಗಣಿನಿ ಆರ್ಯಿಕಾ ಜ್ಞಾನಮತಿ ಮಾತಾಜಿ	....	25
ಅತ್ತಿಮಬ್ಬೆ	....	150
ಹಿಮಾಲಯದಲ್ಲಿ ದಿಗಂಬರ ಮುನಿ	....	25

ನಾನು ಒಬ್ಬ ವ್ಯಾಪಾರಿ

ವ್ಯಾಪಾರವೆ ನನ್ನ ಧರ್ಮ

ಗ್ರಾಹಕನೆ ನನ್ನ ದೇವರು

ಅಂಗಡಿಯೆ ನನ್ನ ದೇವಾಲಯ

ಪರಿಶ್ರಮವೆ ನನ್ನ ಪೂಜೆ

ಗ್ರಾಹಕರ ಸಂತೋಷವೆ

ನನಗೆ ಪ್ರಸಾದ

ಜೀವಿ ಜೀವಿಗೆ ನೆರವು

(ಸಂಗ್ರಹ: ಎ. ಸಿ. ಸುರೇ

